# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜನವರಿ ೦೮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಚಾಮರಾಜನಗರ ಜಿಲ್ಲೆಯಲ್ಲಿ ೨೦೨೪-೨೫ನೇ ಸಾಲಿನಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಚಾಮರಾಜನಗರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ೧೧ ಅಂಗನವಾಡಿ ಕಾರ್ಯಕರ್ತೆಯರು, ೨೩ ಸಹಾಯಕಿಯರು, ಸಂತೇಮರಹಳ್ಳಿ ೮ ಅಂಗನವಾಡಿ ಕಾರ್ಯಕರ್ತೆಯರು, ೧೯ ಸಹಾಯಕಿಯರು, ಗುಂಡ್ಲುಪೇಟೆ ೧೮ ಅಂಗನವಾಡಿ ಕಾರ್ಯಕರ್ತೆಯರು, ೪೫ ಸಹಾಯಕಿಯರು, ಕೊಳ್ಳೇಗಾಲ ೧೪ ಅಂಗನವಾಡಿ ಕಾರ್ಯಕರ್ತೆಯರು, ೨೩ ಸಹಾಯಕಿಯರು, ಹನೂರು ೨೨ ಅಂಗನವಾಡಿ ಕಾರ್ಯಕರ್ತೆಯರು, ೨೪ ಸಹಾಯಕಿಯರು ಹಾಗೂ ಯಳಂದೂರು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ೪ ಅಂಗನವಾಡಿ ಕಾರ್ಯಕರ್ತೆಯರು, ೮ ಸಹಾಯಕಿಯರು ಸೇರಿದಂತೆ ಒಟ್ಟು ೨೧೯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಆಸಕ್ತ ಅಭ್ಯರ್ಥಿಗಳು ವೆಬ್ ಸೈಟ್ https://karnemakaone.kar.nic.in/abcd/ ನಲ್ಲಿ ಜನವರಿ ೯ ರಿಂದ ಫೆಬ್ರವರಿ ೭ ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರ ಶಿಶು ಅಭಿವೃದ್ಧಿ ಯೋಜನೆ ಕಚೇರಿ ದೂ.ಸಂ ೦೮೨೨೬-೨೨೨೬೦೩, ಸಂತೇಮರಹಳ್ಳಿ ದೂ.ಸಂ ೦೮೨೨೬-೨೪೦೨೧೫, ಕೊಳ್ಳೇಗಾಲ ಮತ್ತು ಹನೂರು ದೂ.ಸಂ ೦೮೨೨೪-೨೫೨೩೬೭, ಗುಂಡ್ಲುಪೇಟೆ ದೂ.ಸಂ ೦೮೨೨೯-೨೨೨೨೮೬ ಹಾಗೂ ಯಳಂದೂರು ಶಿಶು ಅಭಿವೃದ್ಧಿ ಯೋಜನೆ ಕಚೇರಿ ದೂ.ಸಂ ೦೮೨೨೬-೨೪೦೨೨೪ ಸಂಪರ್ಕಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.